**ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

ಸ್ಪೆಷಲ್ ಕೇಸ್ ನಂಃ 54/2022 ಪಿ.ಡಬ್ಲ್ಯೂಃ 9

ಸಿ.ಡಬ್ಲ್ಯೂಃ 12

| | |
|---|---|
| ಸಾಕ್ಷಿದಾರರ ಹೆಸರು | ಶಿವಕುಮಾರ್ |
| ತಂದೆಯ ಹೆಸರು | ದಾಮೋದರ ಕೋಟ್ಯಾನ್ |
| ವಯಸ್ಸು | 50 ವರ್ಷ |
| ಉದ್ಯೋಗ | ಮೀನುಗಾರಿಕೆ |
| ವಿಳಾಸ | ಎರ್ಮಾಳು ಬಡಾ |

ದಿನಾಂಕಃ 14-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನಾನು 2022 ರಲ್ಲಿ ಉಚ್ಚಿಲ ಬಡಾ ಗ್ರಾಮ ಪಂಚಾಯಿತಿಯ ಸದಸ್ಯನಾಗಿದ್ದೆ. ಚಾಸಾ-1 ಗೊತ್ತು. ಅವರ ಮಗಳು ಪಂಚಾಯಿತಿಯ ಕಸ ವಿಲೇವಾರಿಯ ಉಸ್ತುವಾರಿ ಮಾಡುತ್ತಿದ್ದರು.

2) ದಿನಾಂಕ 26-02-2022 ರಂದು ಪೊಲ್ಯಕ್ಕೆ ಮಧ್ಯಾಹ್ನ ಸುಮಾರು 12.00 ಗಂಟೆಯ ಸಮಯಕ್ಕೆ ಹೋಗಿದ್ದೆ. ಆಗ ಅಲ್ಲಿ ಚಾಸಾ-1, 11, 21 ಮತ್ತು ಇತರರು ಇದ್ದರು. ಹಿಂದಿನ ದಿನ ಆ ಜಾಗೆಯಲ್ಲಿ ಚಾಸಾ-1 ಮತ್ತು ಆರೋಪಿಯ ನಡುವೆ ಕಸ ಇಡುವ ವಿಷಯವಾಗಿ ಗಲಾಟೆ ಆಗಿದೆ ಎಂದು ಪೊಲೀಸರು ನನಗೆ ಹೇಳಿದ್ದರು. ಅಲ್ಲಿ ಪೊಲೀಸರು ಮದ್ಯಾಹ್ನ 12 ರಿಂದ 1 ಗಂಟೆಯ ಸಮಯದಲ್ಲಿ ಮಹಜರು ಮಾಡಿದ್ದರು. ಅಲ್ಲಿ ನಮ್ಮ ಪೋಟೋ ತೆಗೆದು, ಸಹಿ ಮಾಡಿಸಿದ್ದರು. ಆಗ ನಾನು ಮಾಡಿದ್ದ ಸಹಿಯನ್ನು ಮತ್ತು ದಾಖಲೆಯನ್ನು ಈಗ ನೋಡಿ ಅದನ್ನು ನಿಶಾನೆ ಪಿ-2(ಸಿ) ಎಂದು ಈಗಾಗಲೇ ಗುರುತಿಸಿದೆ. ಆಗ ತೆಗೆದಿದ್ದ ಪೋಟೋಗಳನ್ನು ಈಗಾಗಲೇ ನಿಪಿ-3 ಎಂದು ಗುರುತಿಸಿದೆ. ನಮ್ಮ ಪಂಚಾಯಿತಿಯಲ್ಲಿ ಆಗ ಕಸ ಹಾಕಲು ಜಾಗ ಇಲ್ಲ ಎಂದು, ಕಂದಾಯ ಇಲಾಖೆಗೆ ಮನವಿ ಮಾಡಿಕೊಂಡು ಕೇಳಿದ್ದೆವು. ಅವರು ಪೊಲ್ಯದ

ಜಾಗೆಯನ್ನು ಕಸ ಹಾಕಲು ತೋರಿಸಿದ್ದರು. ಆ ರೀತಿ ಕಸ ಹಾಕಲು ಹೋದಾಗ ಗಲಾಟೆ ಆಗಿತ್ತು ಎಂದು ತಿಳಿದಿತ್ತು.

**ಪಾಟೀಸವಾಲು: ಆರೋಪಿ ಪರವಾಗಿ: ಶ್ರೀ ಟಿ.ವಿ.ಕೆ.ಎಸ್. ವಕೀಲರಿಂದ**

1) ನಾನು ಆ ದಾರಿಯ ಜಾಗೆಯನ್ನು ನೋಡಿಲ್ಲ. ಆ ದಿನ ನಾನು ಸಹಿ ಹಾಕಿದಾಗ ನಮಗೆ ಯಾರೂ ಜಾಗೆಯನ್ನು ತೋರಿಸಿಲ್ಲ. ಅದು ಒಂದು ಸಾರ್ವಜನಿಕ ಜಾಗೆ, ರಸ್ತೆಯ ಬದಿಯಲ್ಲಿ. ನಾನು ಸಹಿ ಮಾಡಿದ್ದು ರಸ್ತೆಯಲ್ಲಿ. ಕಸ ಹಾಕಬೇಕಾಗಿದ್ದ ಜಾಗೆಗೆ ದಾರಿ ಇರುವುದು ಗೊತ್ತಿಲ್ಲ. ಆದಿನ ನಾನು ಯಾವ ಕಾರಣಕ್ಕೆ ಸಹಿ ಮಾಡಿದ್ದೇನೆಂದು ಗೊತ್ತಿಲ್ಲ ಎಂದರೆ, ಚಾಸಾ-21 ಇವರು ಆ ಜಾಗೆಗೆ ಬಂದಿದ್ದರು ಎಂಬುದಕ್ಕಾಗಿ ಸಹಿ ಬೇಕು ಎಂದು ಹೇಳಿ, ಪಡೆದಿದ್ದರು. ಇಷ್ಟಲ್ಲದೆ ನಿಪಿ-2 ರಲ್ಲಿ ಏನು ಇದೆ ಎಂದು ನನಗೆ ಗೊತ್ತಿಲ್ಲ.

2) ನಿಶಾನೆ ಪಿ-3 ರ ಪೋಟೋವನ್ನು ಪೊಲೀಸರು ತೆಗೆದಿದ್ದರು. ಆದಿನ ಎರಡು - ಮೂರು ಪೋಟೋಗಳನ್ನು ತೆಗೆದಿದ್ದರು. ಆದಿನ ನನಗೆ ಅಲ್ಲಿಗೆ ಬರಲು ನೋಟಿಸು ನೀಡಿಲ್ಲ, ಆದರೆ ಪೋನ್ ಮೂಲಕ ಹೇಳಿದ್ದರು. ಆದಿನ ನಿಪಿ-2 ರ ದಾಖಲೆಯ ಸಮಯದಲ್ಲಿ ನಾನು 2 – 3 ದಾಖಲೆಗಳಿಗೆ ಸಹಿ ಮಾಡಿರಬಹುದು. ಆಗ ಬೇರೆ ಯಾರು ಸಹಿ ಮಾಡಿದ್ದರು ಎಂದು ಗೊತ್ತಿಲ್ಲ. ನಿಪಿ-2 ಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

-ಮರುವಿಚಾರಣೆ ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್.ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.